2019 ಕ.ತೀ.ವ 826

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಟಿ. ನರೇಂದ್ರ ಪ್ರಸಾದ್

ಹನುಮಂತರಾಯ –ವಿರುದ್ಧ– ದೇವಿಕಮ್ಮ*

ಸಿವಿಲ್ ಪ್ರಕ್ರಿಯಾ ಸಂಹಿತೆಯ XLIII ನೇ ಕ್ರಮಾದೇಶದ (1) (ಯು) ನಿಯಮದ ಮೇರೆಗಿನ ಸಂಕೀರ್ಣ ಎರಡನೇ ಅಪೀಲು.

ನಿಯತ ಅಪೀಲು ಸಂಖ್ಯೆ: 11/2011ರಲ್ಲಿ ಶೋರಾಪುರದ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ದಿನಾಂಕ: 14.08.2012ರಂದು ಹೊರಡಿಸಿದ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಈ ಅಪೀಲನ್ನು ದಾಖಲಿಸಲಾಗಿದೆ.

ಈ ಬಗೆಯ ದಾವೆಯನ್ನು ವಿಚಾರಣೆ ನಡೆಸುವ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಮೂಲವನ್ನು "ಪೂರ್ವ ನ್ಯಾಯ ನಿರ್ಣಯ'' ತತ್ವದ ನಿಯಮವು ಅಡ್ಡಿಪಡಿಸುವುದಿಲ್ಲ. ಸಾರ್ವಜನಿಕ ನೀತಿಯ ಆಧಾರದ ಮೇಲೆ ತೀರ್ಪಿನ ಮೂಲಕ ವಿಬಂಧದ ನಿಯಮದ ಪ್ರಕಾರ, ವ್ಯಾಜ್ಯಕ್ಕೆ ಅಂತಿಮತೆ ಇರಬೇಕು ಮತ್ತು ಅದೇ ಕಾರಣಕ್ಕೆ ಎರಡು ಬಾರಿ ಯಾರೊಬ್ಬರೂ ಕಿರುಕುಳಕ್ಕೆ ಒಳಗಾಗಬಾರದು. "ಪೂರ್ವ ನ್ಯಾಯ ನಿರ್ಣಯ"ದ ವಾದವನ್ನು ನಿಶ್ಚಿತ ವಾಸ್ತವಾಂಶಗಳ ರುಜುವಾತಿನ ಮೇಲೆ ಕಂಡು ಬಂದಿದೆ ಮತ್ತು ಹಾಗೆ ಕಂಡು ಬಂದ ಸಂಗತಿಗಳಿಗೆ ಕಾನೂನನ್ನು ಅನ್ವಯಿಸುತ್ತಿರುವುದು ಕಂಡು ಬಂದಿದೆ. ಆದ್ದರಿಂದ ವಾದ ಪತ್ರದ ಬುನಾದಿಗೆ ವಾದಗಳನ್ನು ಮಂಡಿಸಿರಲೇಬೇಕಾಗುತ್ತದೆ ಮತ್ತು ನಂತರದಲ್ಲಿ ಒಂದು ವಿವಾದಾಂಶವನ್ನು ರೂಪಿಸಬೇಕಾಗುತ್ತದೆ ಹಾಗೂ ವಿಚಾರಣೆ

*ಸಂಕೀರ್ಣ ಎರಡನೇ ಅಪೀಲು ಸಂಖ್ಯೆ: 1027/2013, ದಿನಾಂಕ 18ನೇ ಡಿಸೆಂಬರ್, 2018.

ನಡೆಸಬೇಕಾಗುತ್ತದೆ. 'ಪೂರ್ವ ನ್ಯಾಯ ನಿರ್ಣಯದ ತತ್ವಗಳು, ಕಾನೂನು ಮತ್ತು ಸಂಗತಿಗಳನ್ನು ಒಳಗೊಂಡ ಮಿಶ್ರ ಪ್ರಶ್ನೆಯಾಗಿದ್ದು, ಇದು ಕೇವಲ ವಾದಪತ್ರವನ್ನು ಪರೀಕ್ಷಿಸುವುದು ಅಷ್ಟೇ ಅಲ್ಲದೆ ಬೇರೆ ಸಾಕ್ಷ್ಯಗಳನ್ನು ಕೂಡ ಪರೀಕ್ಷೆ ಮಾಡಬೇಕಾಗಬಹುದು ಮತ್ತು ಈ ಮುಂಚೆಯ ದಾವೆಯಲ್ಲಿ ಹೊರಡಿಸಿದ್ದ ಆದೇಶವನ್ನು, ಒಂದು ಪ್ರಾರಂಭಿಕ ವಿವಾದವನ್ನಾಗಿ ಅಥವಾ ಅಂತಿಮ ಸುನಾವಣೆಯನ್ನಾಗಿ ತೆಗೆದುಕೊಳ್ಳಬಹುದು, ಆದರೆ, ಸದರಿ ಪ್ರಶ್ನೆಯನ್ನು ಸಾಕ್ಷ್ಯ ದಾಖಲಿಸದೇ ನಿರ್ಧಾರ ಮಾಡುವಂತಿಲ್ಲ. ವೈಶ್ ಅಗರ್‌ವಾಲ್ ಪಂಚಾಯತ್ –ವಿರುದ್ಧ– ಇಂದರ್ ಕುಮಾರ್ ಮತ್ತು ಇತರರು ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪು ನನ್ನ ದೃಷ್ಟಿಕೋನವನ್ನು ದೃಢಪಡಿಸುತ್ತದೆ. ಅದು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> "ಪೂರ್ವ ನ್ಯಾಯ ನಿರ್ಣಯವು ಕಾನೂನು ಮತ್ತು ಸಂಗತಿಗಳ ಮಿಶ್ರ ಪ್ರಶ್ನೆಯನ್ನು ಒಳಗೊಂಡಿದ್ದು, ಕೇವಲ ವಾದಪತ್ರವನ್ನಲ್ಲದೇ ಇತರೆ ಸಾಕ್ಷ್ಯಗಳನ್ನು ಪರೀಕ್ಷಿಸಬೇಕಾಗುತ್ತದೆ. ವಾದಪತ್ರವನ್ನು ತಿರಸ್ಕರಿಸುವುದಕ್ಕೆ ಇದು ಅಂಥ ಆಧಾರವಾಗಿರುವುದಿಲ್ಲ".

ಈ ಮೇಲಿನ ದೃಷ್ಟಿಕೋನದಲ್ಲಿ, ಪೂರ್ವ ನ್ಯಾಯ ನಿರ್ಣಯದ ತತ್ವಕ್ಕೆ ಸಂಬಂಧಿಸಿದಂತೆ ಪಕ್ಷಕಾರರ ಸಾಕ್ಷ್ಯವನ್ನು ದಾಖಲಿಸದೇ ದಾವೆಯನ್ನು ವಜಾಗೊಳಿಸಿರುವ ವಿಚಾರಣಾ ನ್ಯಾಯಾಲಯದ ನಿರ್ಣಯವು ಕಾನೂನು ಸಮ್ಮತವಾಗಿ ಸಮರ್ಥನೀಯವಾಗಿಲ್ಲ. ಕಾನೂನಿನ ಪ್ರಕಾರವಾಗಿ ಮೊದಲ ಅಪೀಲು ನ್ಯಾಯಾಲಯವು ಈ ವಿಷಯವನ್ನು ಹೊಸ ಪರಿಗಣನೆಗಾಗಿ ವಿಚಾರಣಾ ನ್ಯಾಯಾಲಯಕ್ಕೆ ಹಿಂದಕ್ಕೆ ವಾಪಸು ಕಳುಹಿಸಿರುವುದು ಸೂಕ್ತವಾಗಿದೆ. ಆದ್ದರಿಂದ, ಆರ್.ಎ. ಸಂಖ್ಯೆ 11/2011ರಲ್ಲಿ ಮೊದಲ ಅಪೀಲು ನ್ಯಾಯಾಲಯವು ಹೊರಡಿಸಿರುವ ತೀರ್ಪು ಡಿಕ್ರಿಯಲ್ಲಿ ನಾನು ಹಸ್ತಕ್ಷೇಪ ಮಾಡುವುದನ್ನು ನಿರಾಕರಿಸುತ್ತೇನೆ.

ತದನುಸಾರವಾಗಿ ಈ ಅಪೀಲು ವಜಾಗೊಂಡಿದೆ.

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

*1. ಎಐಆರ್ 2015 ಎಸ್‌ಸಿ 3357 ವರದಿ*
*ವೈಶ್ ಅಗರ್‌ವಾಲ್ ಪಂಚಾಯತ್ –ವಿರುದ್ಧ–*
*ಇಂದರ್ ಕುಮಾರ್ ಮತ್ತು ಇತರರು* *(ಉಲ್ಲೇ) 13*

ಅರ್ಜಿದಾರರ ಪರ: ಶ್ರೀ ಜೆ. ಅಗಸ್ಟಿನ್ – ವಕೀಲರು.
ಮತ್ತು ಸಂಜಯ್ ಎ. ಪಾಟೀಲ್ – ವಕೀಲರು.
ಪ್ರತ್ಯರ್ಜಿದಾರರ ಪರ: ಶ್ರೀ ಆರ್.ಎಸ್. ಸಿದ್ಧಾಪುರ್‌ಕರ್ – ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಎಚ್.ಟಿ. ನರೇಂದ್ರ ಪ್ರಸಾದ್:**

ನಿಯತ ಅಪೀಲು ಸಂಖ್ಯೆ: 11/2011ರಲ್ಲಿ ಶೋರಾಪುರದ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ದಿನಾಂಕ: 14.08.2012ರಂದು ಹೊರಡಿಸಿದ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಈ ಅಪೀಲನ್ನು ದಾಖಲಿಸಲಾಗಿದೆ.

2. ಅಧೀನ ನ್ಯಾಯಾಲಯದ ಮುಂದೆ ಅವರವರ ಶ್ರೇಣಿಗೆ ತಕ್ಕಂತೆ ಕಕ್ಷಿದಾರರನ್ನು ಉಲ್ಲೇಖಿಸಲಾಗಿದೆ.

3. ಈ ದಾವೆಯ ಸಂಕ್ಷಿಪ್ತ ವಾಸ್ತವಾಂಶಗಳು ಈ ಮುಂದಿನಂತಿವೆ:

ಶೋರಾಪುರ ತಾಲೂಕಿನ ಸೂಗೂರು ಗ್ರಾಮದಲ್ಲಿ ಸರ್ವೆ ನಂ.12/1 ಮತ್ತು 12/5 ಅನುಕ್ರಮವಾಗಿ ಎರಡೂ ಭೂಮಿಗಳ 1 ಎಕರೆ, 38 ಗುಂಟೆಗಳು ಮತ್ತು 2 ಎಕರೆ 12 ಗುಂಟೆಗಳು ಅಳತೆ ಇರುವ ಜಮೀನಿಗೆ ವಾದಿಯು ವಾರಸುದಾರರಾಗಿದ್ದಾರೆ. ಮುಂದುವರೆದು, ವಾದಿಯ ಪ್ರಕರಣವೇನೆಂದರೆ, ಈ

ದಾವೆಯ ಜಮೀನು ಅವಳ ತಾಯಿಯಿಂದ ಪರಂಪರಾಗತವಾಗಿ ಬಂದುದಾಗಿದೆ. ಪ್ರತಿವಾದಿಗೆ ದಾವೆಯ ಜಮೀನಿನ ಮೇಲೆ ಯಾವುದೇ ಹಕ್ಕು, ಸ್ವಾಮ್ಯ ವಾರಸುದಾರಿಕೆ ಇರುವುದಿಲ್ಲ. ದಾವೆಯ ಜಮೀನಿನಿಂದ ವಾದಿಯ ಸ್ವಾಧೀನತೆಯನ್ನು ತಪ್ಪಿಸುವ ಹಾಗೆ ಮಾಡಿ ಕಂದಾಯದ ದಾಖಲೆಗಳಲ್ಲಿ ತನ್ನ ಹೆಸರನ್ನು ಕಾನೂನುಬಾಹಿರವಾಗಿ ಸೇರಿಸಿದ್ದಾನೆ. ಹಾಗಾಗಿ, ವಾದಿಯು ಘೋಷಣೆ ಮತ್ತು ನಿರ್ಬಂಧಕಾಜ್ಞೆಗಾಗಿ ಪ್ರತಿವಾದಿಯ ವಿರುದ್ಧ ಮೂಲ ದಾವೆ ಸಂಖ್ಯೆ: 16/2007ನ್ನು ದಾಖಲಿಸಿದ್ದಳು. ಸದರಿ ದಾವೆಯನ್ನು ವಜಾಗೊಳ್ಳಲಾಯಿತು. ಸದರಿಯಿಂದ ಬಾಧಿತಳಾದ ವಾದಿಯು ಪ್ರಥಮ ಅಪೀಲು ನ್ಯಾಯಾಲಯದ ಮುಂದೆ ಆರ್.ಎ. ಸಂಖ್ಯೆ 3/2018ನ್ನು ದಾಖಲಿಸಿದಳು. ಪ್ರಥಮ ಅಪೀಲು ನ್ಯಾಯಾಲಯವು ಅದರ ತೀರ್ಪು ಮತ್ತು ಡಿಕ್ರಿಯಿಂದ ದಾವೆಯನ್ನು ವಜಾಗೊಳಿಸಿತು ಮತ್ತು ಓ.ಎಸ್. ಸಂಖ್ಯೆ 16/2007ರಲ್ಲಿ ತೀರ್ಪು ಮತ್ತು ಡಿಕ್ರಿಯನ್ನು ಎತ್ತಿ ಹಿಡಿಯಿತು. ತರುವಾಯದಲ್ಲಿ ವಾದಿಯು, ಪ್ರತಿವಾದಿಯ ವಿರುದ್ಧ ಸ್ವಾಧೀನತೆ ಮತ್ತು ನಿರ್ಬಂಧಕಾಜ್ಞೆಗಾಗಿ ಈ ದಾವೆಯನ್ನು ದಾಖಲಿಸಿದ್ದಾಳೆ.

4. ಸಮನ್ಸ್‌ಗಳನ್ನು ಜಾರಿಗೊಳಿಸಿದ ಮೇಲೆ, ಪ್ರತಿವಾದಿಯು ವಿವರಣಾತ್ಮಕವಾಗಿ ಲಿಖಿತ ಹೇಳಿಕೆಯನ್ನು ದಾಖಲಿಸಿದ್ದು ವಾದಿಯ ಸಂಪೂರ್ಣ ದೃಢೋಕ್ತಿಗಳನ್ನು ಅಲ್ಲಗಳೆದಿದ್ದಾಳೆ. ಮುಂದುವರೆದು, ದಾವೆಯ ಅನುಸೂಚಿತ ಆಸ್ತಿಗೆ ವಾದಿಯು ವಾರಸುದಾರರಲ್ಲ ಎಂದು ಹೇಳಲಾಗಿದೆ. ವಾದಿಯು ಪ್ರತಿವಾದಿಯ ವಿರುದ್ಧ ಓ.ಎಸ್. ಸಂಖ್ಯೆ 16/2007ರಲ್ಲಿ ಮುಂಚೆ ಘೋಷಣೆ ಮತ್ತು ನಿರ್ಬಂಧಕಾಜ್ಞೆಗಾಗಿ ದಾಖಲಿಸಿದ್ದ ದಾವೆಯನ್ನು ವಜಾಗೊಳಿಸಲಾಗಿತ್ತು. ಹಾಗಾಗಿ ವಾದಿಯು, ಪ್ರಸ್ತುತವಾಗಿ ದಾಖಲಿಸಿದ ದಾವೆಯು ಪೂರ್ವ ನ್ಯಾಯನಿರ್ಣಯದ ತತ್ವದಿಂದ ಪ್ರತಿಷೇಧಿತವಾಗಿದೆಯೆಂದು ವಾದಿಸಿದ್ದಾರೆ. ಮೇಲಿನ ವಾದಗಳ ಆಧಾರದ ಮೇಲೆ ವಿಚಾರಣಾ ನ್ಯಾಯಾಲಯವು ಈ ಕೆಳಕಂಡ ವಿವಾದಾಂಶಗಳನ್ನು ರೂಪಿಸಿದೆ:

> *1. ವಾದಿಯು, ತಾನು ದಾವೆಯ ಸ್ವತ್ತಿಗೆ ನಿರುಪಾಧಿಕ ಒಡೆಯಳೆಂದು ಸಾಬೀತುಪಡಿಸಿರುವಳೇ?*

*2. ಪ್ರತಿವಾದಿಯ ಹೆಸರಿನಲ್ಲಿರುವ ದಾವಾ ಸ್ವತ್ತಿನ ಮ್ಯುಟೇಶನ್ ಕಾನೂನು ಬಾಹಿರವೆಂದು ವಾದಿಯು ಸಾಬೀತುಪಡಿಸಿರುವಳೆ?*

*3. ಪ್ರತಿವಾದಿಯ ಆಪಾದಿತ ಹಸ್ತಕ್ಷೇಪವನ್ನು ವಾದಿಯು ಸಾಬೀತುಪಡಿಸಿರುವಳೆ?*

*4. ವಾದಪತ್ರದಲ್ಲಿ ಕೋರಿರುವಂತೆ ಪರಿಹಾರವನ್ನು ಪಡೆಯಲು ವಾದಿಯು ಹಕ್ಕುಳ್ಳವಳಾಗಿದ್ದಾಳೆಯೇ?*

*5. ಪ್ರತಿವಾದಿಯು ದಾವೆಯ ಸ್ವತ್ತಿನ ಮೇಲೆ ಇರುವ ಅವನ ಹಕ್ಕು ಮತ್ತು ಸ್ವಾಧೀನತೆಯು ಪ್ರತಿಕೂಲ ಸ್ವಾಧೀನತೆಯಿಂದ ಪಡೆದಿದ್ದು ಎಂದು ಸಾಬೀತುಪಡಿಸಿರುವನೆ?*

*6. ದಾವೆಯು ಕಾಲ ಪರಿಮಿತಿಯಿಂದ ಪ್ರತಿಷೇಧಿತವಾಗಿದೆಯೇ?*

*7. ಯಾವ ಆದೇಶ ಅಥವಾ ಡಿಕ್ರಿ?*

*ಹೆಚ್ಚುವರಿ ವಿವಾದಾಂಶ:*

*1. ಈ ದಾವೆಗೆ ಪೂರ್ವ ನ್ಯಾಯ ನಿರ್ಣಯದ ತತ್ವವು ಅನ್ವಯವಾಗುವುದೇ?*

5. ವಿಚಾರಣಾ ನ್ಯಾಯಾಲಯವು ಈ ಹೆಚ್ಚುವರಿ ವಿವಾದಾಂಶವನ್ನು ಪ್ರಾಥಮಿಕ ವಿವಾದಾಂಶವೆಂದು ಪರಿಗಣಿಸಿದೆ. ಎರಡೂ ಕಡೆಯ ಪಕ್ಷಕಾರರ ವಾದಗಳನ್ನು ಆಲಿಸಿದ ನಂತರ, ಪೂರ್ವ ನ್ಯಾಯ ನಿರ್ಣಯದ ತತ್ವದಿಂದ ವಾದಿಯ ದಾವೆಯು ಪ್ರತಿಷೇಧಿತವಾಗಿದೆಯೆಂದು ವಿಚಾರಣಾ ನ್ಯಾಯಾಲಯವು ವಜಾ ಮಾಡಿದೆ. ಮೂಲ ದಾವೆ ಸಂಖ್ಯೆ: 164/2009ರಲ್ಲಿ ದಿನಾಂಕ: 28.08.2011ರಂದು ವಿಚಾರಣಾ

ನ್ಯಾಯಾಲಯವು ಹೊರಡಿಸಿದ ತೀರ್ಪು ಮತ್ತು ಡಿಕ್ರಿಯಿಂದ ಬಾಧಿತಳಾದ ವಾದಿಯು ಆರ್.ಎ. ಸಂಖ್ಯೆ: 11/2011 ರಲ್ಲಿ ಶೋರಾಪುರದ ಹಿರಿಯ ಸಿವಿಲ್ ನ್ಯಾಯಾಧೀಶರ ಮುಂದೆ ಮೇಲ್ಮನವಿಯನ್ನು ದಾಖಲಿಸಿದ್ದಾಳೆ. ಪ್ರಥಮ ಅಪೀಲು ನ್ಯಾಯಾಲಯವು ಕಕ್ಷಿದಾರರ ವಾದ ವಿವಾದಗಳ ಆಧಾರದ ಮೇಲೆ ಈ ಕೆಳಕಂಡ ಅಂಶಗಳನ್ನು ಪರಿಗಣನೆಗಾಗಿ ರೂಪಿಸಿದೆ:

*1. ದಾವೆಯು ಕಕ್ಷಿದಾರರ ಸಾಕ್ಷ್ಯವನ್ನು ದಾಖಲಿಸದೇ ಪೂರ್ವನ್ಯಾಯ ನಿರ್ಣಯದ ತತ್ವದಿಂದ ದಾವೆಯು ಪ್ರತಿಷೇಧಿತವಾಗಿದೆ ಎಂದು ಅಭಿಪ್ರಾಯ ಪಟ್ಟಿರುವ ವಿಚಾರಣಾ ನ್ಯಾಯಾಲಯದ ಅಭಿಪ್ರಾಯವು ನ್ಯಾಯಸಮ್ಮತವಾಗಿದೆಯೆ?*

*2. ವಿಚಾರಣಾ ನ್ಯಾಯಾಲಯವು ಹೊರಡಿಸಿದ ತೀರ್ಪು ಮತ್ತು ಡಿಕ್ರಿಯು ಕಾನೂನಿನಲ್ಲಿ ಊರ್ಜಿತಯೋಗ್ಯವಾಗಿದೆಯೇ?*

*3. ಯಾವ ಆದೇಶ?*

6. ಪಕ್ಷಕಾರರ ಮಾನ್ಯ ವಕೀಲರ ದಸ್ತಾವೇಜೀಯ ಸಾಕ್ಷ್ಯಗಳ ಮತ್ತು ನಿವೇದನೆಗಳ ಆಧಾರದ ಮೇಲೆ ಅಪೀಲು ನ್ಯಾಯಾಲಯವು ಅಪೀಲನ್ನು ಪುರಸ್ಕರಿಸಿದೆ ಮತ್ತು ಕಾನೂನಿನ ಪ್ರಕಾರ ಹೊಸದಾಗಿ ವಿಲೆ ಮಾಡುವುದಕ್ಕಾಗಿ ವಿಷಯವನ್ನು ವಿಚಾರಣಾ ನ್ಯಾಯಾಲಯಕ್ಕೆ ವಾಪಸ್ಸು ಕಳುಹಿಸಿದೆ. ಇದರಿಂದ ಬಾಧಿತನಾದ ಪ್ರತಿವಾದಿಯು, ಆರ್.ಎ.ಸಂಖ್ಯೆ: 11/2011ರಲ್ಲಿ ಪ್ರಥಮ ಅಪೀಲು ನ್ಯಾಯಾಲಯವು ಹೊರಡಿಸಿದ ಡಿಕ್ರಿ ಮತ್ತು ತೀರ್ಪನ್ನು ಪ್ರಶ್ನಿಸಿ ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ XLIIIರ (1)(ಯು) ನಿಯಮದ ಅಡಿಯಲ್ಲಿ ಈ ಸಂಕೀರ್ಣ ಎರಡನೇ ಅಪೀಲನ್ನು ದಾಖಲಿಸಿದ್ದಾಳೆ.

7. ಅಪೀಲುದಾರನ ಪರ ವಕೀಲರಾದ ಶ್ರೀ ಜೆ. ಅಗಸ್ಟಿನ್‌ರವರು ಸದರಿ ಪಕ್ಷಕಾರರ ಮಧ್ಯೆ ಇರುವ ಸದರಿ ಆಸ್ತಿಗಾಗಿ ವಾದಿಯು ಓ.ಎಸ್. ಸಂಖ್ಯೆ: 16/2007ರಲ್ಲಿ ಘೋಷಣೆ ಮತ್ತು ನಿರ್ಬಂಧಕಾಜ್ಞೆಗಾಗಿ ಈ ಮುಂಚೆ ವಾದಿಯು ಸಲ್ಲಿಸಿದ್ದ ದಾವೆಯನ್ನು ವಜಾ ಮಾಡಲಾಗಿದೆ. ಇದರ ವಿರುದ್ಧ ಅವರು ಆರ್.ಎ. ಸಂಖ್ಯೆ:3/2008ರಲ್ಲಿ ಒಂದು ಅಪೀಲನ್ನು ದಾಖಲಿಸಿದರು. ಸದರಿ ಅಪೀಲು ವಜಾಗೊಂಡು ಅಂತಿಮತೆಯನ್ನು ಪಡೆದುಕೊಂಡಿತು. ಈಗ ವಾದಿಯು ಸದರಿ ಅದೇ ಆಸ್ತಿಯ ಸ್ವಾಧೀನತೆ ಮತ್ತು ನಿರ್ಬಂಧಕಾಜ್ಞೆಗಾಗಿ ದಾವೆಯನ್ನು ದಾಖಲಿಸಿದ್ದಾರೆ. ಇದು 'ಪೂರ್ವ ನ್ಯಾಯ ನಿರ್ಣಯ' ದಿಂದ ಪ್ರತಿಷೇಧಿತವಾಗಿದೆಯೆಂದು ನಿವೇದಿಸಿದ್ದಾರೆ. ವಿಚಾರಣಾ ನ್ಯಾಯಾಲಯವು ಪಕ್ಷಕಾರರ ವಾದಗಳನ್ನು ಪರಿಗಣಿಸಿ ದಾವೆಯನ್ನು ಸೂಕ್ತವಾಗಿಯೇ ವಜಾಗೊಳಿಸಿದೆ. ಮೊದಲ ಅಪೀಲು ನ್ಯಾಯಾಲಯವು ಈ ಅಪೀಲನ್ನು ಪುರಸ್ಕರಿಸಿ, ಹೊಸದಾಗಿ ಪರಿಗಣನೆಗೆ ವಿಚಾರಣಾ ನ್ಯಾಯಾಲಯಕ್ಕೆ ಈ ವಿಷಯವನ್ನು ಪುನರ್ವಿಚಾರಣೆಗಾಗಿ ವಾಪಸ್ಸು ಕಳುಹಿಸಿ ತಪ್ಪನ್ನು ಎಸಗಿದೆಯೆಂದು ಸಹ ನಿವೇದಿಸಿಕೊಂಡಿದ್ದಾರೆ.

8. ಇದಕ್ಕೆ ವಿರುದ್ಧವಾಗಿ, ವಾದಿ–ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರಾದ ಆರ್. ಸಿದ್ದಾಪುರ್‌ಕರ್ ರವರು 'ಪೂರ್ವ ನ್ಯಾಯ ನಿರ್ಣಯ'ದ ತತ್ವದ ವಿವಾದಾಂಶವು ಕಾನೂನು ಮತ್ತು ವಾಸ್ತವಾಂಶದ ಮಿಶ್ರ ಪ್ರಶ್ನೆಯಾಗಿದೆ ಎಂದು ನಿವೇದಿಸಿದ್ದಾರೆ. ವಿಚಾರಣಾ ನ್ಯಾಯಾಲಯವು, ವಿಚಾರಣೆಯನ್ನೇ ನಡೆಸದೇ ಕೇವಲ ಪಕ್ಷಕಾರರ ವಾದ ವಿವಾದಗಳ ಆಧಾರದ ಮೇಲೆ ದಾವೆಯನ್ನು ವಜಾಗೊಳಿಸಿದೆ. ಮೊದಲ ಅಪೀಲು ನ್ಯಾಯಾಲಯವು ಪಕ್ಷಕಾರರ ವಾದಗಳಲ್ಲಿ ಸೂಕ್ತವಾಗಿಯೇ ಪರಿಗಣನೆ ಮಾಡಿದೆ ಮತ್ತು ಈ ವಿಷಯವನ್ನು ವಿಚಾರಣಾ ನ್ಯಾಯಾಲಯಕ್ಕೆ ಕಾನೂನಿನ ಪ್ರಕಾರವಾಗಿ ಹೊಸದಾಗಿ ಪರಿಗಣನೆಗೆ ವಾಪಸು ಕಳುಹಿಸಿದೆ. ಆದ್ದರಿಂದ ಅವರು ಈ ಅಪೀಲನ್ನು ವಜಾ ಮಾಡುವಂತೆ ಕೋರಿದ್ದಾರೆ.

9. ಪಕ್ಷಕಾರರ ಪರ ಮಾನ್ಯ ವಕೀಲರ ವಾದಗಳನ್ನು ಆಲಿಸಲಾಯಿತು.

10. ವಾದಿಯು, ಪ್ರತಿವಾದಿಯ ವಿರುದ್ಧ ಮೂಲ ದಾವೆ ಸಂಖ್ಯೆ: 16/2007ನ್ನು ಘೋಷಣೆ ಮತ್ತು ನಿರ್ಬಂಧಕಾಜ್ಞೆಗಾಗಿ ದಾಖಲಿಸಿರುವುದು ವಿವಾದಿತವಲ್ಲ. ಕಾಲ ಪರಿಮಿತಿಯಿಂದ ಪ್ರತಿಷೇಧಿತವಾಗಿದೆಯೆಂದು ವಜಾ ಮಾಡಲಾಗಿತ್ತು. ಆ ತೀರ್ಪು ಮತ್ತು ಡಿಕ್ರಿಯ ವಿರುದ್ಧ ವಾದಿಯು ಆರ್.ಎ.ಸಂಖ್ಯೆ: 3/2008ರಲ್ಲಿ ಅಪೀಲು ನ್ಯಾಯಾಲಯದ ಮುಂದೆ ಅಪೀಲನ್ನು ದಾಖಲಿಸಿದ್ದಳು ಮತ್ತು ಅದು ವಜಾಗೊಂಡಿತ್ತು. ಆ ತೀರ್ಪು ಮತ್ತು ಡಿಕ್ರಿಯು ಅಂತಿಮತೆಯನ್ನು ಪಡೆಯಿತು. ತರುವಾಯ, ವಾದಿಯು ಓ.ಎಸ್.ಸಂಖ್ಯೆ: 164/2009ರಲ್ಲಿ ಪ್ರತಿವಾದಿಯ ವಿರುದ್ಧ ಸ್ವಾಧೀನತೆ ಮತ್ತು ನಿರ್ಬಂಧಕಾಜ್ಞೆಗಾಗಿ ದಾವೆಯನ್ನು ದಾಖಲಿಸಿದ್ದಳು. ಸಮನುಗಳನ್ನು ಜಾರಿಗೊಳಿಸಿದ ತರುವಾಯ ಪ್ರತಿವಾದಿಯು ಲಿಖಿತ ಹೇಳಿಕೆಯನ್ನು ದಾಖಲಿಸಿದ್ದಾನೆ ಮತ್ತು ದಾವೆಯು, 'ಪೂರ್ವ ನ್ಯಾಯ ನಿರ್ಣಯ'ದಿಂದ ಪ್ರತಿಷೇಧಿತವಾಗಿದೆ ಎಂಬ ವಾದವನ್ನು ಮಂಡಿಸಿದ್ದಾನೆ.

11. ಪಕ್ಷಕಾರರ ವಿವಾದದ ಸಾಕ್ಷ್ಯವನ್ನು ದಾಖಲಿಸುವುದು ಅವಶ್ಯವೇ ಎಂಬುದನ್ನು ತೀರ್ಮಾನಿಸಲು 'ಪೂರ್ವ ನ್ಯಾಯ ನಿರ್ಣಯ'ವು ಒಂದು ಮಿಶ್ರವಾದ ಕಾನೂನು ಮತ್ತು ಸಂಗತಿಯ ಪ್ರಶ್ನೆಯಾಗಿದೆ. ಇದನ್ನು ಉತ್ತಮವಾಗಿ ಅರ್ಥ ಮಾಡಿಕೊಳ್ಳಲು, ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ XIV ನಿಯಮ 2ಅನ್ನು ಇಲ್ಲಿ ಉದ್ಧೃತಗೊಳಿಸಲಾಗಿದೆ:

> *"2. ಎಲ್ಲ ವಿವಾದಾಂಶಗಳ ಮೇಲೂ ನ್ಯಾಯಾಲಯವು ತೀರ್ಪನ್ನು ಉಚ್ಚರಿಸತಕ್ಕದ್ದು:*
>
> *(1) ಪ್ರಾರಂಭಿಕ ವಿವಾದಾಂಶದ ಮೇಲೆ ಮೊಕದ್ದಮೆಯನ್ನು ವಿಲೇ ಮಾಡಬಹುದಾಗಿದ್ದರೂ, (2)ನೇ ಉಪನಿಯಮದ ಉಪಬಂಧಗಳಿಗೆ ಒಳಪಟ್ಟು, ನ್ಯಾಯಾಲಯವು ಎಲ್ಲ ವಿವಾದಾಂಶಗಳ ಮೇಲೂ ತನ್ನ ತೀರ್ಪನ್ನು ಉಚ್ಚರಿಸತಕ್ಕದ್ದು.*

(2) ಅದೇ ದಾವೆಯಲ್ಲಿ ಕಾನೂನಿನ ವಿವಾದಾಂಶಗಳು ಮತ್ತು ಸಂಗತಿಯ ವಿವಾದಾಂಶಗಳೂ ಉದ್ಭವಿಸಿದ ಮತ್ತು ಆ ಮೊಕದ್ದಮೆಯನ್ನು ಅಥವಾ ಅದರ ಯಾವುದೇ ಭಾಗವನ್ನು ಕಾನೂನಿನ ವಿವಾದಾಂಶದ ಮೇಲೆ ಮಾತ್ರ ವಿಲೆ ಮಾಡಬಹುದೆಂದು ನ್ಯಾಯಾಲಯವು ಅಭಿಪ್ರಾಯಪಟ್ಟಲ್ಲಿ, ಆ ವಿವಾದಾಂಶವು,–

(ಎ) ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ, ಅಥವಾ

(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ದಾವೆಯನ್ನು ಪ್ರತಿಷೇಧಿಸುವುದಕ್ಕೆ,

–ಸಂಬಂಧಿಸಿದ್ದರೆ, ಆ ವಿವಾದಾಂಶವನ್ನು ಅದು ಮೊದಲು ಅಧಿವಿಚಾರಣೆ ಮಾಡಬಹುದು; ಮತ್ತು ಆ ಉದ್ದೇಶಕ್ಕಾಗಿ, ತಾನು ಸೂಕ್ತವೆಂದು ಆಲೋಚಿಸಿದರೆ, ಆ ವಿವಾದಾಂಶವು ನಿರ್ಧರಿತವಾಗುವವರೆಗೆ ಇತರ ವಿವಾದಾಂಶಗಳನ್ನು ಗೊತ್ತುಪಡಿಸುವುದನ್ನು ಮುಂದೂಡಬಹುದು, ಮತ್ತು ಆ ವಿವಾದಾಂಶದ ತೀರ್ಮಾನಕ್ಕೆ ಅನುಸಾರವಾಗಿ ಆ ದಾವೆಯ ಬಗ್ಗೆ ಕ್ರಮ ಕೈಗೊಳ್ಳಬಹುದು.''

12. ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಅಥವಾ ಯಾವುದೇ ಕಾನೂನಿನ ಮೂಲಕ ಸೃಜಿತವಾದ ದಾವೆಯ ಪ್ರತಿಷೇಧಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ಕಾನೂನಿನ ಈ ವಿವಾದವನ್ನು ಪ್ರಾರಂಭಿಕ ವಿವಾದವಾಗಿ ಪರಿಗಣಿಸುವ ನ್ಯಾಯಾಲಯವು ಈ ಪ್ರಕರಣವನ್ನು ವಿಲೇವಾರಿ ಮಾಡಬಹುದೆಂಬುದು ಈ ಮೇಲೆ ಹೇಳಿದ ಉಪಬಂಧದಿಂದ ಸ್ಪಷ್ಟವಾಗುತ್ತದೆ. ಅಂದರೆ ಅದರ ಅರ್ಥ ಯಾವುದೇ ಕಾನೂನಿನಿಂದ ರೂಪಿತವಾದ ದಾವೆಯ ಪ್ರತಿಷೇಧ ಅಥವಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಈ ಕಾನೂನಿನ ವಿವಾದಕ್ಕೆ ಸಂಬಂಧಿಸಿದಂತೆ ಪ್ರಾರಂಭಿಕ

ವಿವಾದವೆಂದು ಪರಿಗಣಿಸಬಹುದು ಮತ್ತು ಪಕ್ಷಕಾರರ ಸಾಕ್ಷ್ಯವನ್ನು ದಾಖಲಿಸದೇ ದಾವೆಯನ್ನು ವಿಲೇವಾರಿ ಮಾಡಬಹುದು. ವಿವಾದವು ಕಾನೂನು ಮತ್ತು ಸಂಗತಿಗಳೆರಡನ್ನು ಒಳಗೊಂಡಿದ್ದ ಪಕ್ಷದಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ XIV ಕ್ರಮಾದೇಶದ ನಿಯಮ 2ರ ಉಪಬಂಧದ ದೃಷ್ಟಿಯಲ್ಲಿ ಪಕ್ಷಕಾರರ ಸಾಕ್ಷ್ಯವನ್ನು ದಾಖಲಿಸದೇ ಪ್ರಾಥಮಿಕ ವಿವಾದದಂತೆ ಅದನ್ನು ತೀರ್ಮಾನಿಸಲಾಗುವುದಿಲ್ಲ.

13. ಈ ಬಗೆಯ ದಾವೆಯನ್ನು ವಿಚಾರಣೆ ನಡೆಸುವ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಮೂಲವನ್ನು 'ಪೂರ್ವ ನ್ಯಾಯ ನಿರ್ಣಯ, ತತ್ವದ ನಿಯಮವು ಅಡ್ಡಿಪಡಿಸುವುದಿಲ್ಲ. ಸಾರ್ವಜನಿಕ ನೀತಿಯ ಆಧಾರದ ಮೇಲೆ ತೀರ್ಪಿನ ಮೂಲಕ ವಿಬಂಧದ ನಿಯಮದ ಪ್ರಕಾರ, ವ್ಯಾಜ್ಯಕ್ಕೆ ಅಂತಿಮತೆ ಇರಬೇಕು ಮತ್ತು ಅದೇ ಕಾರಣಕ್ಕೆ ಎರಡು ಬಾರಿ ಯಾರೊಬ್ಬರೂ ಕಿರುಕುಳಕ್ಕೆ ಒಳಗಾಗಬಾರದು. 'ಪೂರ್ವ ನ್ಯಾಯ ನಿರ್ಣಯ'ದ ವಾದಪತ್ರವು ನಿಶ್ಚಿತ ವಾಸ್ತವಾಂಶಗಳ ರುಜುವಾತಿನ ಮೇಲೆ ಕಂಡು ಬಂದಿದೆ ಮತ್ತು ಹಾಗೆ ಕಂಡು ಬಂದ ಸಂಗತಿಗಳಿಗೆ ಕಾನೂನನ್ನು ಅನ್ವಯಿಸುತ್ತಿರುವುದು ಕಂಡು ಬಂದಿದೆ. ಆದ್ದರಿಂದ ವಾದ ಪತ್ರದ ಬುನಾದಿಗೆ ವಾದಗಳನ್ನು ಮಂಡಿಸಿರಲೇಬೇಕಾಗುತ್ತದೆ ಮತ್ತು ನಂತರದಲ್ಲಿ ಒಂದು ವಿವಾದಾಂಶವನ್ನು ರೂಪಿಸಬೇಕಾಗುತ್ತದೆ ಹಾಗೂ ವಿಚಾರಣೆ ನಡೆಸಬೇಕಾಗುತ್ತದೆ. 'ಪೂರ್ವ ನ್ಯಾಯ ನಿರ್ಣಯದ ತತ್ವಗಳು, ಕಾನೂನು ಮತ್ತು ಸಂಗತಿಗಳನ್ನು ಒಳಗೊಂಡ ಮಿಶ್ರ ಪ್ರಶ್ನೆಯಾಗಿದ್ದು, ಇದು ಕೇವಲ ವಾದಪತ್ರವನ್ನು ಪರೀಕ್ಷಿಸುವುದು ಅಷ್ಟೇ ಅಲ್ಲದೆ ಬೇರೆ ಸಾಕ್ಷ್ಯಗಳನ್ನು ಕೂಡ ಪರೀಕ್ಷೆ ಮಾಡಬೇಕಾಗಬಹುದು ಮತ್ತು ಈ ಮುಂಚೆಯ ದಾವೆಯಲ್ಲಿ ಹೊರಡಿಸಿದ್ದ ಆದೇಶವನ್ನು, ಒಂದು ಪ್ರಾರಂಭಿಕ ವಿವಾದವನ್ನಾಗಿ ಅಥವಾ ಅಂತಿಮ ಸುನಾವಣೆಯನ್ನಾಗಿ ತೆಗೆದುಕೊಳ್ಳಬಹುದು, ಆದರೆ, ಸದರಿ ಪ್ರಶ್ನೆಯನ್ನು ಸಾಕ್ಷ್ಯ ದಾಖಲಿಸದೇ ನಿರ್ಧಾರ ಮಾಡುವಂತಿಲ್ಲ. ***ವೈಶ್ ಅಗರ್‌ವಾಲ್ ಪಂಚಾಯತ್ –ವಿರುದ್ಧ– ಇಂದರ್ ಕುಮಾರ್ ಮತ್ತು ಇತರರು***[1] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ

1. ಎಐಆರ್ 2015 ಎಸ್‌ಸಿ 3357

ತೀರ್ಪು ನನ್ನ ದೃಷ್ಟಿಕೋನವನ್ನು ದೃಢಪಡಿಸುತ್ತದೆ. ಅದು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> *"ಪೂರ್ವ ನ್ಯಾಯ ನಿರ್ಣಯವು ಕಾನೂನು ಮತ್ತು ಸಂಗತಿಗಳ ಮಿಶ್ರ ಪ್ರಶ್ನೆಯನ್ನು ಒಳಗೊಂಡಿದ್ದು, ಕೇವಲ ವಾದಪತ್ರವನ್ನಲ್ಲದೇ ಇತರೆ ಸಾಕ್ಷ್ಯಗಳನ್ನು ಪರೀಕ್ಷಿಸಬೇಕಾಗುತ್ತದೆ. ವಾದಪತ್ರವನ್ನು ತಿರಸ್ಕರಿಸುವುದಕ್ಕೆ ಇದು ಅಂಥ ಆಧಾರವಾಗಿರುವುದಿಲ್ಲ".*

14. ಈ ಮೇಲಿನ ದೃಷ್ಟಿಕೋನದಲ್ಲಿ, ಪೂರ್ವ ನ್ಯಾಯ ನಿರ್ಣಯದ ತತ್ವಕ್ಕೆ ಸಂಬಂಧಿಸಿದಂತೆ ಪಕ್ಷಕಾರರ ಸಾಕ್ಷ್ಯವನ್ನು ದಾಖಲಿಸದೇ ದಾವೆಯನ್ನು ವಜಾಗೊಳಿಸಿರುವ ವಿಚಾರಣಾ ನ್ಯಾಯಾಲಯದ ನಿರ್ಣಯವು ಕಾನೂನು ಸಮ್ಮತವಾಗಿ ಸಮರ್ಥನೀಯವಾಗಿಲ್ಲ. ಕಾನೂನಿನ ಪ್ರಕಾರವಾಗಿ ಮೊದಲ ಅಪೀಲು ನ್ಯಾಯಾಲಯವು ಈ ವಿಷಯವನ್ನು ಹೊಸ ಪರಿಗಣನೆಗಾಗಿ ವಿಚಾರಣಾ ನ್ಯಾಯಾಲಯಕ್ಕೆ ಹಿಂದಕ್ಕೆ ವಾಪಸು ಕಳುಹಿಸಿರುವುದು ಸೂಕ್ತವಾಗಿದೆ. ಆದ್ದರಿಂದ, ಆರ್.ಎ. ಸಂಖ್ಯೆ 11/2011ರಲ್ಲಿ ಮೊದಲ ಅಪೀಲು ನ್ಯಾಯಾಲಯವು ಹೊರಡಿಸಿರುವ ತೀರ್ಪು ಮತ್ತು ಡಿಕ್ರಿಯಲ್ಲಿ ನಾನು ಹಸ್ತಕ್ಷೇಪ ಮಾಡುವುದನ್ನು ನಿರಾಕರಿಸುತ್ತೇನೆ.

15. ತದನುಸಾರವಾಗಿ ಈ ಅಪೀಲು ವಜಾಗೊಂಡಿದೆ.